

ಮೈಸೂರಿನ ರೇಸ್‌ಕೋರ್ಸ್

ಚಾಮುಂಡಿಬೆಟ್ಟ, ಚಾಮುಂಡೇಶ್ವರಿ ದರ್ಶನ ಮಾಡಿದ ಮೇಲೆ ಬೆಟ್ಟ, ದೇವಿಯ ಇತಿಹಾಸ ತಿಳಿಯದಿದ್ದರೆ ಪ್ರವಾಸ ಪೂರ್ಣಗೊಳ್ಳುವುದೆ? ಇಂತಹ ಐತಿಹಾಸಿಕ ಸ್ಥಳಗಳು ತಮ್ಮದೇ ಇತಿಹಾಸ, ಮಹತ್ವವನ್ನು ಒಳಗೊಂಡಿರುತ್ತವೆ.

ಚಾಮುಂಡಿ ಬೆಟ್ಟದ ಮೇಲು ತುದಿಯಲ್ಲಿ ಚಾಮುಂಡೇಶ್ವರಿ ದೇವಾಲಯವಿದೆ. ದೇವಿಯು ದುರ್ಗೆಯ ಅವತಾರ, ಶಕ್ತಿಯ ಪ್ರತಿರೂಪ. 'ಸ್ಕಂದ' ಪುರಾಣ ಹಾಗೂ ಇತರೆ ಐತಿಹಾಸಿಕ ಗ್ರಂಥಗಳಲ್ಲಿ ಬೆಟ್ಟ ಹಾಗೂ ದೇವಿಯ ಇತಿಹಾಸ ನಮೂದಾಗಿದೆ. ಎಂಟು ಬೆಟ್ಟಗಳಿಂದ ಸುತ್ತುವರಿದ 'ತ್ರಿಮುಕುಟ ಕ್ಷೇತ್ರ' ಎಂದು ಇಡೀ ಬೆಟ್ಟವನ್ನು ಗುರುತಿಸಲಾಗಿದೆ. ಗಿರಿ ಶಿಖರದ ಪಶ್ಚಿಮ ದಿಕ್ಕಿಗೆ ಇರುವ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿ ನೆಲೆಸಿದ್ದು, ದೇವಿಯ ನೆಲೆಯಿಂದಾಗಿ ಚಾಮುಂಡೇಶ್ವರಿ ಬೆಟ್ಟ ಎಂದು ಕರೆಯಲಾಗುತ್ತಿದೆ. ಮೈಸೂರಿನ ಪಶ್ಚಿಮ ದಿಕ್ಕಿನಿಂದ ನೋಡಿದರೆ ಚಾಮುಂಡಿ ಬೆಟ್ಟವು ಹತನಾದ ಮಹಿಷಾಸುರ ಮಲಗಿದಂತೆ ಕಾಣುತ್ತದೆ. ಚಾಮುಂಡೇಶ್ವರಿಯ ಹೆಸರಿನಿಂದಲೇ ಬೆಟ್ಟಕ್ಕೆ ಈ ಹೆಸರು ನಾಮಾಂಕಿತವಾಗಿದೆ ಎಂದು ಇತಿಹಾಸಕಾರರು ಹೇಳುತ್ತಾರೆ.

ಚಾಮುಂಡಿ ಬೆಟ್ಟ ಸಮುದ್ರ ಮಟ್ಟದಿಂದ 3489 ಅಡಿ ಎತ್ತರದಲ್ಲಿದೆ. ಭಕ್ತಿಯಿಂದ ಹತ್ತುವವರಿಗೆ ಒಂದು ಸಾವಿರ ಕಲ್ಲಿನ ಮೆಟ್ಟಿಲುಗಳಿದ್ದು, ಒಂದನೇ ದೊಡ್ಡರಾಜ ಒಡೆಯರ್ ನಿರ್ಮಿಸಿದ್ದಾರೆ. ವಾಹನಗಳು ಸರಾಗವಾಗಿ ಬೆಟ್ಟವೇರಲು ಉತ್ತಮ ರಸ್ತೆಯಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಈ ರಸ್ತೆ ಮಾರ್ಗ ನಿರ್ಮಿಸುವ ಮೂಲಕ ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ಈ ರಸ್ತೆಯನ್ನೆ ಉತ್ತಮಪಡಿಸಿದ್ದು, ಈಗಲೂ ಪ್ರಯಾಣಕ್ಕೆ ಬಳಸಲಾಗುತ್ತಿದೆ. ಮೆಟ್ಟಿಲು ಏರಿ ದಣಿದು ಹೋದವರಿಗೆ ಅಲ್ಲಿನ ಪರಿಸರ ದೇಹದ ಆಯಾಸವನ್ನು ದೂರಮಾಡಿ, ಮನಸ್ಸಿನಲ್ಲಿ ಪುಳಕ ತರುತ್ತದೆ. ಒಂದು ರೀತಿಯಲ್ಲಿ ಎಲ್ಲವನ್ನೂ ಮರೆಸುವುದೇ ಈ ಪ್ರಕೃತಿಯ ಮಹಿಮೆ.

ಬೆಟ್ಟ ಹಚ್ಚ ಹಸುರನ್ನು ಹೊದ್ದು ನಿಂತಿದ್ದು, ತನ್ನ ಒಡಲಲ್ಲಿ ಅಪಾರ ಜೀವರಾಶಿಯನ್ನು ತುಂಬಿಕೊಂಡಿದೆ. ಅಪರೂಪದ ಗಿಡ, ಮರಗಳು, ಗಿಡಮೂಲಿಕೆಗಳು, ಪಕ್ಷಿ, ಪ್ರಾಣಿ ಸಂಕುಲಗಳು ಇವೆ. ಮೈಸೂರಿನತ್ತ ಪ್ರಯಾಣಿಸುವಾಗ ದೂರದಿಂದಲೇ ಬೆಟ್ಟವನ್ನು ಗುರುತಿಸಬಹುದಾಗಿದೆ. ಬೆಟ್ಟದ ಮಾರ್ಗದಲ್ಲಿ ಪ್ರಯಾಣ ಆರಂಭಿಸುತ್ತಿದ್ದಂತೆ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಕಣ್ತುಂಬಿಕೊಳ್ಳಬಹುದು. ಅಂಬಾವಿಲಾಸ ಅರಮನೆ, ಲಲಿತ ಮಹಲ್ ಅರಮನೆ, ರೇಸ್ ಕೋರ್ಸ್, ಸಂತಫಿಲೋಮಿನಾ ಚರ್ಚ್, ಕೃಷ್ಣರಾಜಸಾಗರ ಜಲಾಶಯ ಮೊದಲಾದ ಪ್ರಮುಖ ಸ್ಥಳಗಳನ್ನು ನೋಡಬಹುದಾಗಿದೆ. ಬೆಟ್ಟದಲ್ಲಿ ಚಾಮುಂಡೇಶ್ವರಿ ದೇಗುಲದ ಜತೆಗೆ ಮಹಬಲಾದ್ರಿ, ನಾರಾಯಣಸ್ವಾಮಿ, ಗ್ರಾಮ ದೇವತೆ ಮಾರಮ್ಮನ ದೇವಸ್ಥಾನಗಳಿವೆ.

## ಚಾಮುಂಡೇಶ್ವರಿ ಪುರಾಣ

ಚಾಮುಂಡೇಶ್ವರಿ ಪೌರಾಣಿಕ ಹಿನ್ನೆಲೆಯ ದೇವಿಯಾಗಿದ್ದು, 'ದೇವಿ ಮಹಾತ್ಮೆ' ಪುರಾಣದ ಮುಖ್ಯ ವಸ್ತುವಾಗಿದ್ದಾಳೆ. ಬೆಟ್ಟದಲ್ಲಿ ವಾಸವಿದ್ದ ಮಹಿಷಾಸುರನನ್ನು ವಧಿಸಿದಳೆಂಬ ಕತೆ ಈ ಪುರಾಣದಲ್ಲಿ ದಾಖಲಾಗಿದೆ. ಬೆಟ್ಟದಲ್ಲಿ ಪುಟ್ಟದೊಂದು ಗುಡಿಯಿದ್ದು, ಅದನ್ನು ಕಾಲಾನಂತರದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಹೊಯ್ಸಳ, ವಿಜಯನಗರ, ಮೈಸೂರು ಅರಸರ ಕೊಡುಗೆಯನ್ನು ಇತಿಹಾಸಕಾರರು ದಾಖಲಿಸಿದ್ದಾರೆ. 14ನೇ ಶತಮಾನದ ಆರಂಭದಲ್ಲಿ ಅಧಿಕಾರಕ್ಕೆ ಬಂದ ಮೈಸೂರು ಅರಸರು ಚಾಮುಂಡಿಯ ಆರಾಧಕರಾಗಿದ್ದು, ಬೃಹತ್ ದೇಗುಲವನ್ನು ಅಭಿವೃದ್ಧಿಪಡಿಸಿದ್ದಾರೆ. ಚಾಮುಂಡೇಶ್ವರಿ ದೇವಸ್ಥಾನವನ್ನು ಚೌಕಾಕೃತಿಯಲ್ಲಿ, ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ.

ದೇಗುಲದ ಹೆಬ್ಬಾಗಿಲು, ಪ್ರವೇಶದ್ವಾರ, ನವರಂಗ, ಅಂತರಾಳ, ಗರ್ಭಗೃಹ, ಪ್ರಾಕಾರಗಳನ್ನು ಹೊಂದಿದೆ. ಮಹಾದ್ವಾರದಲ್ಲಿ ಸುಂದರವಾದ ಗೋಪುರ, ಗರ್ಭಗುಡಿಯ ಮೇಲೆ ವಿಮಾನ ಶಿಖರಗಳಿವೆ. 19ನೇ ಶತಮಾನದಲ್ಲಿ ಪಿರಮಿಡ್ ಆಕಾರದ, ದ್ರಾವಿಡ ಶೈಲಿಯಲ್ಲಿ ಏಳು ಅಂತಸ್ತುಗಳ ಗೋಪುರಗಳನ್ನು ನಿರ್ಮಿಸಲಾಗಿದ್ದು, ಶಿಖರದ ಮೇಲೆ ಏಳು ಚಿನ್ನದ ಕಲಶಗಳಿವೆ. ದ್ವಾರದ ಬಾಗಿಲಿಗೆ ಬೆಳ್ಳಿಯ ತಗಡನ್ನು ಹೊದಿಸಲಾಗಿದ್ದು,